<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರಿದ ಪಾಟೀ ಸವಾಲುಃ-</u> ಶ್ರೀ. ಎ ಎನ್ ವಕೀಲರಿಂದ ಪ್ರತಿವಾದಿಯ ಪರವಾಗಿ

22. ದಿಃ05.08.2022ರಂದು ಮೆಸೇಜ್ ಗಳು ನನ್ನ ಫೋನಿಗೆ ಬಂದಿರುತ್ತವೆ. ಪ್ರತಿವಾದಿಯವರ ಫೋನಿನಿಂದ ಸದರಿ ಮೆಸೇಜ್ ಗಳು ಬಂದಿರುತ್ತವೆ. ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ಹೇಳಿರುತ್ತೇನೆ. ದಾವೆ ದಾಖಲಿಸುವಾಗ ಕೆಲವು ಮೆಸೇಜ್ ಗಳ ಪ್ರಿಂಟೌಟ್ ಗಳನ್ನು ಹಾಜರುಪಡಿಸಿದ್ದು ಅವುಗಳು ನನ್ನ ಸ್ನೇಹಿತರ ಫೋನ್ ಗೆ ಬಂದಿರುತ್ತವೆ. ಆದರೆ ಆ ರೀತಿ ಮೆಸೇಜ್ ಗಳು ನನಗೆ ಬಂದಿವೆ ಎಂದು ತೋರಿಸಲು ಪ್ರಿಂಟೌಟ್ ಇರುವುದಿಲ್ಲ. ನಿಪಿ-3ರ ಫೋಟೋಗಳನ್ನು ನನ್ನ ಸ್ನೇಹಿತನ ಫೋನಿನಿಂದ ತೆಗೆಸಲಾಯಿತು. ಆದರೆ ದಿನಾಂಕ ಗೊತ್ತಿಲ್ಲ. ನಿಪಿ-5ನ್ನು ಶ್ರೀಕೃಷ್ಣ ಪ್ರಿಂಟರ್ಸ್ ಅಂಗಡಿಯವರು ನನಗೆ ನೀಡಿರುತ್ತಾರೆ. ಅದರ ಕ್ಲೋನ್ ಕಾಪಿ ನನ್ನ ಬಳಿ ಇರುವುದಿಲ್ಲ. ಪೆನ್ ಡ್ರೈವ್ ನೀಡಿದ ದಿನಾಂಕ ಗೊತ್ತಿಲ್ಲ. ನಿಪಿ-4ರ ರಶೀದಿಯನ್ನು ನಾನು ಪಡೆದುಕೊಂಡಿರುತ್ತೇನೆ ಆದರೆ ದಿನಾಂಕ ನೆನಪಿರುವುದಿಲ್ಲ. ನಿಪಿ-4ರಲ್ಲಿ ದಿನಾಂಕ ಉಲ್ಲೇಖ ಮಾಡದೇ ಇರಲು ಹಾಗೂ ಯಾರಿಗೆ ನೀಡಲಾಗಿದೆ ಎಂದು ಹೆಸರು ಬರೆಯದೇ ಇರಲು ಕಾರಣವೇನು ಎಂದು ನನಗೆ ಗೊತ್ತಿಲ್ಲ. ದಾವೆಯೊಂದಿಗೆ ಸಲ್ಲಿಸಿರುವ ಪ್ರಿಂಟೌಟ್ ಗಳನ್ನು ಕೃಷ್ಣ ಜೆರಾಕ್ಸ್ ಅಂಗಡಿಯಲ್ಲಿ ತೆಗೆಸಿರುತ್ತೇನೆ. ಸದರಿ ಜೆರಾಕ್ಸ್ ನ್ನು ಮೊಬೈಲ್ ನಿಂದ ತೆಗೆಸಲಾಯಿತು. ಸ್ಕ್ರೀನ್ ಶಾಟ್ ಅನ್ನು ಯಾವಾಗ ತೆಗೆದಿದ್ದು ಎಂದು ನನಗೆ ನೆನಪಿಲ್ಲ. ಸದರಿ ಮೆಸೇಜ್ ಈಗ ನನ್ನ ಮೊಬೈಲ್ ನಲ್ಲಿ ಇರುವುದಿಲ್ಲ. ಅದನ್ನು ನಾನು ಡಿಲೀಟ್ ಮಾಡಿದ್ದೇನೆ. ವಕೀಲರಿಗೆ ನೀಡಿದ ನಂತರ ಅದನ್ನು ಡಿಲೀಟ್ ಮಾಡಿದ್ದೇನೆ. ಅದರ ಮೂಲ ಸ್ಕ್ರೀನ್ ಶಾಟ್ ನ ಪ್ರತಿ ನನ್ನ ಬಳಿ ಇರುವುದಿಲ್ಲ. ಶ್ರೀಕೃಷ್ಣ ಡಿಜಿಟಲ್

ಸ್ಟುಡಿಯೋ ಮತ್ತು ವೀಡಿಯೋ ಎಂದು ಕಂಡು ಬರುವ ಫೋಟೋವನ್ನು ನನ್ನ ಸ್ನೇಹಿತ ವಸಂತರವರು ತೆಗೆದಿರುತ್ತಾರೆ. ಅದನ್ನು ದಿಃ13.06.2025ಕ್ಕೆ ತೆಗೆಯಲಾಗಿದೆ. ಆ ದಿನಾಂಕದ ನಂತರ ಸದರಿ ಫೋಟೋಗಳು ನನ್ನ ಸ್ನೇಹಿತನ ಬಳಿ ಇದ್ದವು. ನನಗೆ ಯಾವಾಗ ಸಿಕ್ಕವು ಎಂದು ದಿನಾಂಕ ನೆನಪಿಲ್ಲ. ನಿಪಿ-3ರ ಫೋಟೋಗಳನ್ನು ಎಲ್ಲಿಂದ ಡೌನ್ ಲೋಡ್ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ದಿಃ16.06.2025ರಂದು ನಾನು ಒಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಫೋಟೋಗಳನ್ನು ನನ್ನ ಮೊಬೈಲ್ ನಿಂದ ಡೌನ್ ಲೋಡ್ ಮಾಡಿದ್ದೇನೆಂದು ನನ್ನ ಪ್ರಮಾಣ ಪತ್ರದಲ್ಲಿ ಬರೆದಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸ್ನೇಹಿತನ ಫೋನಿನಿಂದ ಡೌನ್ ಲೋಡ್ ಮಾಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಫೋಟೋಗಳು ನನ್ನ ಹಾಗೂ ಪ್ರತಿವಾದಿಯವರ ನಡುವಿನ ದಿನನಿತ್ಯ ಸಂಪರ್ಕದ ಸಂಬಂಧ ಬಂದಂತಹ ಫೋಟೋಗಳು ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ ಅವುಗಳ ಪೈಕಿ ಕೆಲವು ನನ್ನ ಫೋನಿನಲ್ಲಿ ಬಂದಿರುತ್ತವೆ. ನನ್ನ ಫೋನಿಗೆ ಬಂದ ಯಾವುದೇ ಮೆಸೇಜನ್ನು ಡೌನ್ ಲೋಡ್ ಮಾಡಿಸಿರುವುದಿಲ್ಲ.

23. ಪ್ರಮಾಣ ಪತ್ರ ಬೇಕು ಎಂದು ರಾಜೇಶ್ ರವರ ಬಳಿ ಒಂದು ತಿಂಗಳ ಹಿಂದೆ ನಾನು ಕೇಳಿರುತ್ತೇನೆ. ಅವರು ಅವರ ಪ್ರಮಾಣ ಪತ್ರವನ್ನು ನೀಡಿದ ದಿನಾಂಕ ನನಗೆ ನೆನಪಿಲ್ಲ. ಸದರಿ ಪ್ರಮಾಣ ಪತ್ರವನ್ನು ದಿಃ09.07.2025ರಂದು ನೀಡಲಾಗಿದೆ ಎಂದರೆ ಸರಿ. ಸದರಿ ಪ್ರಮಾಣ ಪತ್ರಕ್ಕೆ ನಾನು ಯಾವುದೇ ದಾಖಲಾತಿ ನೀಡಿರುವುದಿಲ್ಲ. ಆದರೆ ನನ್ನ ಸ್ನೇಹಿತ ವಸಂತರವರು ವಾಟ್ಸಪ್ ಮತ್ತು ಫೇಸ್ ಬುಕ್ಕಿನಲ್ಲಿ ಬಂದಂತಹ ಮೆಸೇಜ್ ಗಳನ್ನು ನೀಡಿರುತ್ತಾರೆ. ಆದರೆ ದಿನಾಂಕ ಗೊತ್ತಿಲ್ಲ. ರಾಜೇಶ್ ರವರ ಪ್ರಮಾಣ ಪತ್ರ ನೀಡುವ ದಿನಾಂಕಕ್ಕೆ ಯಾವುದೇ ದಾಖ್ಲಾತಿಯನ್ನು

ನೀಡಿರುವುದಿಲ್ಲ. ರಾಜೇಶ್ ರವರು ವಾಟ್ಸಪ್ ಮತ್ತು ಫೇಸ್ ಬುಕ್ಕಿನಲ್ಲಿ ಬಂದಂತಹ ಮೆಸೇಜ್ ಗಳನ್ನು ನೋಡಿ ಅವರ ಪ್ರಮಾಣ ಪತ್ರ ನೀಡಿರುತ್ತಾರೆ. ಪ್ರಮಾಣ ಪತ್ರ ಕೊಡುವ ದಿನ ಅವರು ಮೆಸೇಜ್ ನ್ನು ನೋಡಿರುತ್ತಾರೆ. ಅದೇ ದಿನ ಪ್ರಿಂಟೌಟ್ ತೆಗೆದಿರುತ್ತಾರೆ. ಸದರಿ ಪ್ರಿಂಟೌಟ್ ಗಳು ನನ್ನ ಬಳಿ ಇರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಮೊಬೈಲ್ ನಂಬರ್ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಅದರಲ್ಲಿ ಹ್ಯಾಶ್ ವಾಲ್ಯೂವಿನ ಬಗ್ಗೆ ವರದಿ ಇರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಮೊಬೈಲ್ ನ ಕ್ರಮ ಸಂಖ್ಯೆ ಇರುವುದಿಲ್ಲ ಎಂದರೆ ಸರಿ. ಯಾವಾಗ ಪ್ರಿಂಟ್ ತೆಗೆಯಲಾಗಿದೆ ಎಂದು ಸಹ ಪ್ರಮಾಣ ಪತ್ರದಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. ಕಂಪ್ಯೂಟರ್ ನಿಂದ ಮೆಸೇಜ್ ಗಳನ್ನು ಪ್ರಿಂಟ್ ತೆಗೆದ ನಂತರ ಅವುಗಳಿಗೆ ಡಿಜಿಟಲ್ ಸಹಿ ಮಾಡಿರುವುದಿಲ್ಲ. ಪ್ರಿಂಟ್ ತೆಗೆಯಲಾಯಿತು ಎಂದು ಹೇಳಲಾದ ಕಂಪ್ಯೂಟರಿನ ನಂಬರನ್ನು ಸಹ ಪ್ರಮಾಣ ಪತ್ರದಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ.

24. ನನ್ನ ಸ್ನೇಹಿತನ ಮೊಬೈಲ್ ಯಾವ ಕಂಪನಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ಸ್ನೇಹಿತನ ಮೊಬೈಲ್ ಗೆ ಮೆಸೇಜ್ ಗಳು ದಿಃ05.08.2022ರಂದು ಬಂದಿರುತ್ತವೆ. ದಿಃ22 ರಿಂದ ದಿಃ13.06.2025ರವರೆಗೆ ಸದರಿ ಮೆಸೇಜ್ ಗಳನ್ನು ಎಲ್ಲಿ ಸೇವ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

25. ನಾನು ಸಲ್ಲಿಸಿರುವ ಫೇಸ್ ಬುಕ್ ಮೆಸೇಜ್ ಪ್ರತಿವಾದಿಯವರ ಖಾತೆಗೆ ಸೇರಿರುತ್ತದೆ. ಫೇಸ್ ಬುಕ್ ನ ಬಗ್ಗೆ ಗೊತ್ತಿಲ್ಲ. ಖಾತೆದಾರರ ಫೋಟೋ ಅದರಲ್ಲಿ ಕಾಣುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಫೇಸ್ ಬುಕ್ ಖಾತೆ ಹಾಗೂ ವಾಟ್ಸಪ್ ಮೆಸೇಜ್ ಗಳನ್ನು ಹ್ಯಾಕ್ ಮಾಡಿ ಟ್ಯಾಂಪರ್ ಮಾಡುತ್ತಾರೆ ಎಂಬ ಬಗ್ಗೆ ನಾನು ಕೇಳಿದ್ದೇನೆ. ಫೇಸ್ ಬುಕ್

ಅಥವಾ ವಾಟ್ಸಪ್ ನಲ್ಲಿ ಮಾನಹಾನಿಯಾಗುವಂತಹ ಮೆಸೇಜ್ ಗಳು ಇದ್ದವು ಎಂಬುದನ್ನು ರುಜುವಾತುಪಡಿಸಲು ಫೇಸ್ ಬುಕ್ ಹಾಗೂ ವಾಟ್ಸಪ್ ಕಂಪನಿಯಿಂದ ಪ್ರಮಾಣ ಪತ್ರಗಳನ್ನು ಪಡೆದಿರುವುದಿಲ್ಲ. ನಾನು ಸಹ ಸದರಿ ಕಂಪನಿಗಳಿಗೆ ದೂರು ನೀಡಿರುವುದಿಲ್ಲ.

26. ಪ್ರತಿವಾದಿಯವರಿಗೆ ಫೇಸ್ ಬುಕ್ ಖಾತೆ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸೈಬರ್ ಕ್ರೈಂ ನವರಿಗೆ ದೂರು ಸಲ್ಲಿಸಿರುವುದಿಲ್ಲ.

27. ರಾಜೇಶ್ ರವರು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಆದರೆ ಅವರು ಸರ್ವೀಸ್ ಪ್ರೊವೈಡರ್ ಅಲ್ಲ. ರಾಜೇಶ್ ರವರ ಪ್ರಮಾಣ ಪತ್ರವನ್ನು ನಾನೇ ಹಾಕಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿಯೂ ಸಹ ಯಾವ ದಾಖಲಾತಿಗಳ ಮಟ್ಟಿಗೆ ಸದರಿ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ ಎಂದು ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ರಾಜೇಶ್ ರವರ ಪ್ರಮಾಣ ಪತ್ರದ ಜೊತೆ ಅವರು ತೆಗೆದ ಪ್ರಿಂಟೌಟ್ ಗಳನ್ನು ಲಗತ್ತು ಮಾಡಿಲ್ಲ ಎಂದರೆ ಸರಿ. ರಾಜೇಶ್ ರವರು ಅವರ ಪ್ರಮಾಣ ಪತ್ರದಲ್ಲಿ ಅವಶ್ಯಕ ಕಾನೂನಿನ ಮಾಹಿತಿಯನ್ನು ಯಾವ ಕಾರಣಕ್ಕೆ ನೀಡಿಲ್ಲ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಎರಡು ಫೋಟೋಗಳು ಪ್ರಿಂಟರ್ ನ ಫೋಟೋಗಳು ಎಂದರೆ ಸರಿ. ನಾನು ಹಾಜರುಪಡಿಸಿರುವ ಇತರೆ ಫೋಟೋಗಳು ಸಹ ಜೆರಾಕ್ಸ್ ಆಗಿದ್ದು ಪ್ರಿಂಟೌಟ್ ಅಲ್ಲ ಎಂದರೆ ಸರಿ. ಸ್ಕ್ರೀನ್ ಶಾಟ್ ತೆಗೆದಿರುವುದು ವಸಂತ ಆದರೆ ಅವರು ಅವುಗಳನ್ನು ಯಾವಾಗ ಯಾವ ಮೊಬೈಲ್ ನಿಂದ ಸ್ಕ್ರೀನ್ ಶಾಟ್ ತೆಗೆದರು ಎಂದು ಅವರಿಂದ ಪ್ರಮಾಣ ಪತ್ರ ಪಡೆದಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-3ರ ದಾಖಲಾತಿಗಳನ್ನು ನಾನೇ ಟ್ಯಾಂಪರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಾನು ಹೇಳಿರುವ ಹಾಗೇ ಯಾವುದೇ

ಮೆಸೇಜನ್ನು ಮಾಡಿಲ್ಲ, ಅವುಗಳನ್ನು ಕಳಹಿಸಿಲ್ಲ ಹಾಗೂ ಅಂತಹ ಮೆಸೇಜ್ ಗಳನ್ನು ಅವರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಮೊಬೈಲ್ ನಲ್ಲಿ ಮೆಸೇಜ್ ಮಾಡುವಷ್ಟು ಪರಿಣತಿ ಹೊಂದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ